ರಾಷ್ಟ್ರೀಕರಣಗೊಳಿಸಿದಾಗ ದಾವಣಗೆರೆಯಲ್ಲಿ ನಗರ ಸಂಚಾರಿ ಬಸ್ಸನ್ನು ಓಡಿಸುವ ಯೋಜನೆಯನ್ನು ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ ಎಂದು ತಿಳಿಸಿದ್ದಾರೆ. ನಾನು ಕೇಳಿದ ಪ್ರಶ್ನೆ ದಾವಣಗೆರೆ ನಗರಸಂಚಾರಿ ಬಸ್ ವಿಷಯ. ಆದುದರಿಂದ ಸರಿಯಾದ ಉತ್ತರವನ್ನು ತಿಳಿಸುತ್ತಾರೆಯೇ?

*ಶ್ರೀ ಕೆ. ಹೆಚ್. ರಂಗನಾಥ್ :—ಒಂದು ಸಮಗ್ರವಾದ ಯೋಜನೆಯನ್ನು ತೆಗೆದುಕೊಳ್ಳಬೇಕೆಂದು ವಿಚಾರ ಮಾಡಿರುವುದರಿಂದ ಅದನ್ನು ತೆಗೆದುಕೊಂಡಾಗ ನಗರ ಸಂಚಾರಿ ಬಸ್ಸನ್ನು ಓಡಿಸುವ ವಿಚಾರವನ್ನೂ ತೆಗೆದುಕೊಳ್ಳಲ್ಪ್ಪೇವೆಂದು ಉತ್ತರ ಕೊಟ್ಟಿದ್ದೇನೆ.

ಶ್ರೀಮತಿ ಸಿ. ನಾಗಮ್ಮ ಕೇಶವ ಮೂರ್ತಿ :—ಈಗಾಗಲೇ ಡಿಪೋಗಳನ್ನು ಎಲ್ಲಿ ಹಾಕಬೇಕು ಎನ್ನುವ ವಿಚಾರ ಪರಿಶೀಲನೆಗೆ ಬಂದಿದ್ದು ಎರಡು ಜಾಗಗಳನ್ನು ಸಹ ತೋರಿಸಲಾಗಿದೆ. ಸ್ಥಳ ಪರಿಶೀಲನೆಯ ವಿಚಾರವನ್ನು ಆದಷ್ಟು ಬೇಗ ತೀರ್ಮಾನ ತೆಗೆದುಕೊಂಡು ತಕ್ಷಣ ದಾವಣಗೆರೆಯಲ್ಲಿ ನಗರ ಸಂಚಾರಿ ಬಸ್ಸುಗಳನ್ನು ಓಡಿಸುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ?

ಶ್ರೀ ಕೆ. ಹೆಚ್. ರಂಗನಾಥ್ :—ಆದಷ್ಟು ಜಾಗ್ರತೆ ಮಾಡಬೇಕು ಎನ್ನುವುದೇ ಸರ್ಕಾರದ ಉದ್ದೇಶ.

WAGES PAID TO LABOURERS OF GURMITKAL TOWN MUNICIPALITY

62. SRI MALLIKARJUNA KHARGE (Gurmitkal).—Will the Minister for Law and Municipal Administration be pleased to state :—

(*a*) the basic wages paid to the Municipal Labourers of Gurmitkal Town Municipality per month ;

(*b*) the total remuneration paid to Class IV Servants ?

SRI D. K. NAIKAR (Minister for Law and Municipal administration) :—

Asterisks indicate that remarks or speeches have not been revised that member concerned.

(SRI D. K. NAIKAR)

(*a*) Municipal labourers are not paid wages but a monthly salary ranging from Rs. 57-50 to Rs. 63- 0 per month.

(*b*) A monthly salary in Grade pay of Rs. 50-1-60 plus DA of 71-00 per month.

SRI MALLIKARJUNA KHARGE :— Why has the Government not implemented the Tukol Pay Commssion recommendation in respect of the Municipalities of this State ?

*SRI D.K. NAIKAR :— As per the information I have received from the Deputy Commissioner, the pay scales prescribed by the Government have been implemented even in Gurmitkal Municipality.

SRI MALLIKARJUNA KHARGE : Supplementary to (b) : The total emoluments come to about Rs. 125 per month per worker at other places. Why has this scale not been implemented particularly in Gurmitkal Town ?

SRI D. K. NAIKAR : The pay scales prescribed by the Government are required to be adopted by the Municipalities by passing a resolution. The Gurmitkal Municipality has also adopted the present scale and it has been implemented as per the information supplied by the Deputy Commissioner.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್ : ಸರ್ಕಾರಿ ಉದ್ಯೋಗದಲ್ಲಿರುವ ನಾಲ್ಕನೇ ದರ್ಜೆ ನೌಕರರಿಗೆ ಕೊಡುತ್ತಿರುವ ವೇತನವನ್ನು ಪೌರ ಕಾರ್ಮಿಕರಿಗೂ ಕೊಡುವುದಕ್ಕೆ ಸಾಧ್ಯವೇ ?

ಶ್ರೀ ಡಿ. ಕೆ. ನಾಯಕರ್ : ಗುರುಮಿಟ್ಕಲ್‌ನಲ್ಲಿರುವ ನಾಲ್ಕನೇ ದರ್ಜೆ ಪೌರ ನೌಕರರಿಗೆಲ್ಲ ಸರ್ಕಾರದ ವೇತನವನ್ನು ಜಾರಿ ಮಾಡಿ ಕೊಡಲಾಗಿದೆ